# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.

**C.C. - 22-22** ಪಿಡಬ್ಲ್ಯೂ: **8**

ಸಿಡಬ್ಲ್ಯೂ: **13**

ಸಾಕ್ಷಿದಾರರ ಹೆಸರು : ಯೂಸೂಫ್ ಎಂ.ಕಿಲ್ಲೇದಾರ

ತಂದೆ ಹೆಸರು : ಮಹಮ್ಮದಗೌಸ

ವಯಸ್ಸು : 56 ವರ್ಷ

ಉದ್ಯೋಗ : ಮುಖ್ಯ ಪೇದೆ

ವಾಸಸ್ಥಳ : ಹಳೇಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕ: 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ನಾನು 2017 ರಿಂದ 2021 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕೆಲಸ ಮಾಡಿದ್ದೇನೆ.

ದಿ: 28.9.2021 ರಂದು ಮ: 1 ಗಂಟೆಯಿಂದ ರೇಲ್ವೆ ಅಂಡರ ಬ್ರಿಜ್ ಬಳಿ ನನ್ನನ್ನು ಸುಗಮ ಸಂಚಾರದ ಕರ್ತವ್ಯಕ್ಕೆ ನನ್ನನ್ನು ನೇಮಿಸಲಾಗಿತ್ತು. ಮ: 1.30 ರಿಂದ 2 ಗಂಟೆ ಅವಧಿಯಲ್ಲಿ ಒಂದು ಟಿಪ್ಪರ ಲಾರಿ ನಂ: ಕೆಎ-25 ಎಎ-3504 ನೇದ್ದನ್ನು ಅದರ ಚಾಲಕ ಅಂಬೇಡ್ಕರ ಸರ್ಕಲ್ ಕಡೆಯಿಂದ ಅತಿ ವೇಗವಾಗಿ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು, ಅದೇ ರೋಡಿನಲ್ಲಿ ಒಂದು ಬೈಕ್ ನಂ: ಕೆಎ-25 ಇ ಎಲ್ /1788 ನೇದ್ದನ್ನು ಅದರ ಚಾಲಕನು ಒಂದು ಮಗುವನ್ನು ಕೂಡ್ರಿಸಿಕೊಂಡು ಅದೇ ರೋಡಿನಲ್ಲಿ ಬಂದು, ಮಂಟೂರ ರೋಡ ಕಡೆಗೆ ಹೋಗುತ್ತಿದ್ದಾಗ ಸದರಿ ಬೈಕಿನ ಬಲಗಡೆ ಭಾಗಕ್ಕೆ ಟಿಪ್ಪರ ಲಾರಿ ಡಿಕ್ಕಿಪಡಿಸಿ ಅಪಘಾತ ಪಡಿಸಿರುತ್ತಾನೆ. ಅಪಘಾತ ದಲ್ಲಿ ಬೈಕಿನ ಚಾಲಕ ಮ್ಯಾಥೂ ರವರಿಗೆ ಕಾಲಿಗೆ ಹಾಗೂ ತಲೆಗೆ ಪೆಟ್ಟಾಗಿತ್ತು. ನಾನು ಅವರನ್ನು ಆಸ್ಪತ್ರೆಗೆ ಆಟೋದಲ್ಲಿ ರವಾನಿಸಿದ್ದೇನೆ. ಮಗುವಿಗೆ ಏನಾಗಿರಲಿಲ್ಲ, ಅವರ ಸಂಬಂಧಿಕರು ಕರೆದುಕೊಂಡು ಹೋದರು. ಟ್ರಕ್ ಚಾಲಕನ ಹೆಸರು ಮಹಮ್ಮದ ಯೂನಸ್ ಅನ್ಸಾರಿ ಅಂತಾ ಇರುತ್ತದೆ. ಅದೇ ಕಾಲಕ್ಕೆ ಚಾಸಾ-14 ರವರು ಬಂದು ಆರೋಪಿ ಹಾಗೂ ಅಪಘಾತ ಪಡಿಸಿದ ಟಿಪ್ಪರನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಮಹಮ್ಮದ ಯೂನಸ್ ಅನ್ಸಾರಿ ರವರನ್ನು ನೋಡಿದರೆ ಗುರುತಿಸುತ್ತೇನೆ.

ಗಾಯಾಳು ಮ್ಯಾಥ್ಯೂ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದರು ಅಂತಾ ಗೊತ್ತಾಯಿತು. ಆರೋಪಿ ನೋಡಿದರೆ ಗುರುತಿಸುತ್ತೇನೆ. ಆರೋಪಿ ಗುರುತಿಸುವ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ಹೇಳಿದ್ದಾರೆ. ನಾನು ಈ ಕುರಿತು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ. ವಾಹನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯೂ ನಿಪಿ.12 ರಲ್ಲಿರುವ ವಾಹನ ನೋಡಿದರೆ ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ, ವಕೀಲರಿಂದಃ**

ನಾವು ಊಟವನ್ನು ಮನೆಯಲ್ಲಿ ಮಾಡಿಕೊಂಡು ಬಂದಿದ್ದೆನು. ಪಿಂಟೋ ರೋಡಿನಲ್ಲಿ ಬಹಳಷ್ಟು ವಾಹನಗಳು ಹಾಗೂ ಜನರು ಓಡಾಡುತ್ತಾರೆ ಅಂದರೆ ಸರಿ. ವಾಹನಗಳು ಹಾಗೂ ಜನರು ಬಹಳ ಓಡಾಡುವುದರಿಂದ ಅಲ್ಲಿ ವಾಹನಗಳು ನಿಧಾನವಾಗಿ ಹೋಗುತ್ತವೆ ಅಂದರೆ ಸರಿ. ಬೈಕ್ ಸವಾರ ರೇಲ್ವೆ ಬ್ರಿಜ್ಡ ಬಳಿ ಹೋಗಲು ಬಲಗಡೆಗೆ ತಿರುಗಿಕೊಳ್ಳುತ್ತಿದ್ದನು ಅಂದರೆ ಸರಿ. ಟಿಪ್ಪರ ವಾಹನ ಗದಗ ರೋಡ ಕಡೆಗೆ ಹೊರಟಿತ್ತು ಅಂದರೆ ಸರಿ. ಬೈಕ ಸವಾರ ಬಲಗಡೆಗೆ ಹೊರಟಿದ್ದನು ಹಾಗೂ ಟಿಪ್ಪರ ಚಾಲಕ ಎಡಗಡೆಗೆ ಹೊರಟಿದ್ದನು ಅಂದರೆ ಸರಿ ಎಂದು ಆಮೇಲೆ ಸರಿಯಲ್ಲವೆಂದು ಹೇಳುತ್ತಾರೆ. ನಾವು ಹಿರಿಯ ಅಧಿಕಾರಿ ಹೇಳಿದ ಹಾಗೆ ಕೆಲಸ ಮಾಡುತ್ತೇವೆ ಅಂದರೆ ಸರಿ. ಬೈಕ್ ಸವಾರ ಕಲ್ಲಿಗೆ ಡಿಕ್ಕಿಪಡಿಸಿ ಸ್ಕಿಡ್ಡಾಗಿ ಬಿದ್ದಿನು ಅಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮ್ಯಾಥ್ಯೂ ಮದ್ಯಪಾನ ಮಾಡಿದ್ದನು ಅಂದರೆ ಸರಿಯಲ್ಲ. ಪಿಂಟೋ ಸರ್ಕಲ್ ಬಳಿ ಸಿ ಸಿ ಟಿವಿ ಕ್ಯಾಮರಾ ಇವೆ ಅಂದರೆ ಸರಿ. ನಾನು ಆ ದಿನ ಸ್ಥಳದಲ್ಲಿರಲಿಲ್ಲ ಅಂದರೆ ಸರಿಯಲ್ಲ. ಮ್ಯಾಥ್ಯೂ ಕುಡಿದು ಸ್ಕಿಡ್ಡಾಗಿ ಬಿದ್ದು ಗಾಯಹೊಂದಿದ್ದಾನೆ ಅಂದರೆ ಸರಿಯಲ್ಲ. ಅಪಘಾತ ಗೂ ಹಾಗೂ ಆರೋಪಿಗೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಗಾಡಿ ನಂಬರ ಹೇಳಿಲ್ಲ ಅಂದರೆ ಸರಿಯಲ್ಲ. ಯಾವುದೇ ಅಪಘಾತ ಆಗಿಲ್ಲ ಅಂದರೆ ಸರಿಯಲ್ಲ. ಅಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.